ಕೇಳಬೇಕಲ್ವಾ...?'

ಒಂದೆರಡು ನಿಮಿಷ ಹಾಗೆ ಅಮೃತಾಳ ಕಣ್ಣನ್ನೇ ನೇರವಾಗಿ ನಿಟ್ಟಿಸಿ, ಜಯಂತ ತನ್ನ ಬಲಹಸ್ತವನ್ನು ಚಾಚಿದ್ದ. ಅಮೃತಾ ಕೂಡ ಅವನ ನೆಟ್ಟ ಕಣ್ಣುಗಳನ್ನೇ ಮರುನಿಟ್ಟಿಸುತ್ತಾ ತುಸು ಹಿಂಜರಿಕೆಯಿಂದಲೇ ಅವನ ಚಾಚಿದ ಬಲಹಸ್ತವನ್ನು ತನ್ನ ಎಡಗೈಯಲ್ಲಿ ತೆಗೆದುಕೊಂಡು ಅವನ ಹಸ್ತದ ಮೇಲೆ ಸಹಿ ಹಾಕಿದ್ದಳು. ಈರ್ವರೂ ತಮ್ಮ ಕೈಗಳನ್ನು ಹಿಂತೆಗೆದುಕೊಂಡಿರಲಿಲ್ಲ. ಎಷ್ಟೋ ಹೊತ್ತಾದ ಮೇಲೆ ಎಚ್ಚೆತ್ತಂತೆ ಜಯಂತನು 'ಅಮ್ಮು, ದಯವಿಟ್ಟು ಈ ಆಟೊಗ್ರಾಫ್‌ನ ಫೋಟೊ ತೆಗೆದುಕೊಡ್ತೀರಾ?' ಎಂದ.

ಅಮ್ಮು ತನ್ನ ಹಸ್ತದ ಮೇಲೆ ಜಯಂತನ ಹಸ್ತ ಇದ್ದಂತೆಯೇ ಮೊಬೈಲ್ ಕ್ಯಾಮೆರಾ ಕ್ಲಿಕ್ ಮಾಡಿದ್ದಳು. ಆ ಅಮೃತಘಳಿಗೆಯು ಅವರೀರ್ವರ ಭಾವಲೋಕದ ಬಾಗಿಲು ತೆರೆದಿತ್ತು. ಚಿತ್ರೀಕರಣವೆಲ್ಲ ಮುಗಿದ ಮೇಲೆ ಟೀವಿ ತಂಡ ತಡ ಮಧ್ಯಾಹ್ನ ಹಿಂತಿರುಗಿತ್ತು — ಜೊತೆಗೆ ಅಮ್ಮು ಕೂಡ. ಬೆಳಿಗ್ಗೆಯಿಂದ ಏನೂ ತಿಂದಿರದ ಜಯಂತನ ಹೊಟ್ಟೆ ಚುರುಗುಡುತ್ತಿತ್ತು. ಹಸಿವನ್ನು ಉಚಾಯಿಸುವಂತೆ, ಯಾವುದೋ ರುಚಿಯಾದ ಖಾದ್ಯವೊಂದರ ಘಮಲು ಗಾಳಿಯಲ್ಲಿ ತೇಲಿ ಬರುತ್ತಿತ್ತು. ಅತ್ತಿತ್ತ ಕಣ್ಣಾಯಿಸಿದಾಗ ಅಲ್ಲೇ ಬಿಟ್ಟು ಹೋಗಿದ್ದ ಅಮ್ಮುವಿನ ಊಟದ ಡಬ್ಬಿಯ ಚೀಲ ಕಂಡಿತ್ತು. ತೆಗೆದು ನೋಡಲು ಊಟದ ಡಬ್ಬಿಯ ಮೇಲೆ ಒಂದು ಚಿಕ್ಕ ಚೀಟಿ ಇತ್ತು. ಅದರ ಮೇಲೆ 'ಇದು ನಿಮಗಾಗಿ' ಎಂದು ಬರೆದಿತ್ತು. ಚೀಟಿಯ ಹಿಂಭಾಗದಲ್ಲಿ ಅವಳ ಮನೆಯ ವಿಳಾಸವು ಬರೆದಿತ್ತು. ಊಟದ ಡಬ್ಬಿಯಲ್ಲಿದ್ದ ಆ ಕೊಡಗಿನ ರುಚಿಯಾದ ಖಾದ್ಯ ಅವನ ಹೊಟ್ಟೆಯನ್ನು ತುಂಬಿಸಿತ್ತು, ಜೊತೆಗೆ ಮನಸ್ಸೂ ಕೂಡ.

ಮಾರನೆಯ ದಿನ ನಸುಕಿನಲ್ಲೇ ಊಟದ ಡಬ್ಬಿಯ ಚೀಲವನ್ನು ಹಿಡಿದು, ಅಯಸ್ಕಾಂತದಿಂದ ಸೆಳೆಯಲ್ಪಟ್ಟಂತೆ ಅಮ್ಮುವಿನ ಮನೆಗೆ ಹೋಗಿದ್ದ ಜಯಂತ. ಅವನ ಬರುವಿಕೆಗಾಗಿಯೇ ಕಾದು ಕುಳಿತಂತಿದ್ದಳು ಅಮ್ಮು. ಅವನಿಗೆ ಕೂರಲು ಕುರ್ಚಿ ತೋರಿಸಿ, ತಾನು ಎದುರಿನ ಕುರ್ಚಿಯಲ್ಲಿ ಕುಳಿತಳು.

'ತುಂಬಾ ರುಚಿಯಾಗಿತ್ತು ಆ ತಿನಿಸು... ಅದರ ಹೆಸರೇನು?'

'ಅದು ನನ್ನ ಫೇವರೆಟ್ ಕೂಡ — ಕಡಂಬುಟ್ಟು ಮತ್ತು ಶುಂಠಿ ಪಜ್ಜಿ'.

'ಅಲ್ಲಿ ಯುನಿಟ್‌ನಲ್ಲಿ ಊಟದ ವ್ಯವಸ್ಥೆ ಇರುತ್ತೆ ಅಲ್ವಾ?'

'ಮೊದಲಿನಿಂದಲೂ ಅಷ್ಟೆ, ಅನಿವಾರ್ಯವಾದ ಹೊರತು, ಹೊರಗೆ ತಿನ್ನಲಾರೆ... ಮನೆ ಅಡುಗೆ, ಅದರಲ್ಲೂ ನಮ್ಮ ಕೊಡವರ ಅಡುಗೆ ತುಂಬಾ ಇಷ್ಟ. ಅದಕ್ಕೇ ಹೊರಬಂದಾಗ ನನ್ನ ಊಟದ ಡಬ್ಬಿಯನ್ನು ತೆಗೆದುಕೊಂಡು ಹೋಗುತ್ತೇನೆ'.

'ಆ ಅದೃಷ್ಟ ನನಗಿಲ್ಲ. ಮನೆ ಊಟ ಮಾಡಿ ಸುಮಾರು ಒಂದೂವರೆ ವರ್ಷ ಆಗಿರಬಹುದು'.

'ಯಾಕೆ?'

'... ನನ್ನ ತಂದೆ ತಾಯಿ ಇಬ್ಬರು ಒಂದೇ ದಿನ ಅಪಘಾತದಲ್ಲಿ ತೀರಿಹೋದರು. ಮನೆಯಲ್ಲಿ ಇನ್ನಾರು ಇಲ್ಲ'.

ತಡೆ ತಡೆದು ಬಂದಿತ್ತು ಜಯಂತನ ಉತ್ತರ. ಕಣ್ಣು ಹನಿಗೂಡಿದ್ದವು, ಅಳದಿರಲು ಹರಸಾಹಸ ಪಡುತ್ತಿದ್ದ. ಅವನ ಮನಸ್ಸಿನ ತುಮುಲವನ್ನು ಗಮನಿಸಿದ ಅಮ್ಮು ಎದ್ದು ಜಯಂತನ ಪಕ್ಕದಲ್ಲಿ ಕೂತು ಅವನನ್ನು ಸಂತೈಸುವಂತೆ ಅವನ ಕೈಯನ್ನು ತನ್ನ ಕೈಗೆ ತೆಗೆದುಕೊಂಡು ಇನ್ನೊಂದು ಕೈಯಿಂದ ಮುಚ್ಚಿ, ಸಂತೈಸುವ ಸ್ನೇಹಿತೆಯಾಗಿದ್ದಳು'.

'ಅನಾಥಪ್ರಜ್ಞೆಯೊಂದಿಗೆ ರಾಜಿಯಾಗುವುದು ತುಂಬಾ ಕಷ್ಟ ಅಮ್ಮು'.

'ಅದು ಎಷ್ಟು ಕಷ್ಟ ಎಂದು ಗೊತ್ತಿದೆ. ಆ ವಿಷಯದಲ್ಲಿ ನಾನು ನಿಮ್ಮಷ್ಟೇ ವಂಚಿತಳು'. ಅಮ್ಮು ತನ್ನ ಪಾಲಿನ ದುರದೃಷ್ಟವನ್ನು ನೆನೆಯುತ್ತಾ, ತಲೆಯನ್ನು ಜಯಂತನ ಹೆಗಲಿಗೆ ವಾಲಿಸಿದ್ದಳು. ಒಬ್ಬರಿಗೊಬ್ಬರು ಮೌನವಾಗಿ ಸಾಂತ್ವನಿಸುತ್ತಾ ತಮ್ಮ ತಮ್ಮ ಶೋಕದಲ್ಲಿ ಮುಳುಗಿದ್ದರು. ಜಯಂತನ ಕೈ ಅಮ್ಮುವಿನ ತಲೆಯನ್ನು ಮೃದುವಾಗಿ ನೇವರುತ್ತಿತ್ತು.

ಕೆಲವೇ ವಾರಗಳಲ್ಲಿ ಜಯಂತನಿಗೆ ಕೊಡವರ ಬಹುತೇಕ ಖಾದ್ಯಗಳ ಪರಿಚಯವಾಗಿತ್ತು. ಅಮ್ಮುಗೆ ಬಗೆ ಬಗೆಯ ಅಡುಗೆ ಮಾಡುವುದು ಒಂದು ನೆಚ್ಚಿನ ಹವ್ಯಾಸವಾಗಿತ್ತು. ಜಯಂತನಾದರೊ, ಹಾಗೆ ಮಾಡಿದ ಅಡುಗೆಯನ್ನು ವಿಮರ್ಶಿಸಬಲ್ಲ ರಸಜ್ಞನಾಗಿದ್ದ. ದಿನಕಳೆದಂತೆ ತಮ್ಮ ಪೂರ್ವಾಪರ, ಭವಿಷ್ಯದ ಕನಸುಗಳನ್ನು ಹಂಚಿಕೊಳ್ಳುತ್ತಾ ಈರ್ವರ ನಡುವಿನ ತೆರೆಗಳು ಸರಿದು, ಆತ್ಮೀಯತೆ, ಅನ್ಯೋನ್ಯತೆ ಅರಳಿಕೊಂಡಿತ್ತು. ಯಾವ ಅಡೆತಡೆಯೂ ಇಲ್ಲದಂತೆ ಸ್ವಚ್ಛಂದವಾಗಿ ಹಾರಾಡುತ್ತ ಆಕಾಶದ ವ್ಯಾಪ್ತಿ ವಿಸ್ತಾರಗಳನ್ನು ಅಳೆಯಲು ಹೊರಟಂತಹ ಪ್ರಣಯ ಪಕ್ಷಿಗಳಾಗಿದ್ದರು. ಪ್ರತಿ ದಿನವೂ ಒಬ್ಬರನ್ನೊಬ್ಬರು ಕಾಣುವ ಕೂಡುವ ತವಕ, ತಣಿಯದ ದಾಹವಾಗಿತ್ತು.

ನಿಧಾನವಾಗಿ ತಮ್ಮ ಒಬ್ಬಂಟಿತನದ ಕತ್ತಲ ಕೂಪದಿಂದಾಚೆ ಬಂದು, ತಮ್ಮದೇ ಒಂದು ನಗುವಿನ, ಗೆಲುವಿನ, ಒಲವಿನ ಲೋಕ ಕಟ್ಟಿದ್ದರು. ತಮ್ಮ ನಡುವಿನ ಪ್ರೇಮಬಂಧವನ್ನು ಘಂಟಾಘೋಷವಾಗಿ ಪ್ರಪಂಚಕ್ಕೆ ಸಾರಿ ಹೇಳಿದ್ದರು.

ಅದೊಂದು ದಿನ ರಾಶಿ ಕೆಲಸವಿದ್ದರೂ ತೊಡಗಿಸಿಕೊಳ್ಳುವ ಮನಸ್ಸಾಗಿರಲಿಲ್ಲ, ಎಲ್ಲ ಮರೆತು ಇಡೀ ದಿನ ಅಮ್ಮುವಿನೊಡನೆ ಸುತ್ತಾಡಬೇಕೆನಿಸಿತ್ತು. ಆದರೆ ಅಮ್ಮುಗೆ ಅಂದು ಶೂಟಿಂಗ್ ಇದೆ ಎಂದು ತಿಳಿದು, ನೇರ ಲೊಕೇಶನ್ನಿಗೇ ಹೋಗಿದ್ದ ಜಯಂತ್. ಅದು ಒಂದು ಶೂಟಿಂಗ್ ಸಲುವಾಗಿಯೇ ಸಜ್ಜಿತವಾದ ವಿಶಾಲವಾದ ತೋಟದ ಮನೆ. ಚಿತ್ರೀಕರಣಕ್ಕೆ ಸಂಬಂಧಿಸಿದ ಹತ್ತಾರು ಚಟುವಟಿಕೆಗಳಿಂದ ಅಷ್ಟೂ ಜಾಗ ಗಿಜಿಗುಟ್ಟುತ್ತಿತ್ತು. ಜಯಂತ್ ಕರೆ ಮಾಡಿದ ತಕ್ಷಣ ಒಂದೈದು ನಿಮಿಷ ಬಿಡುವು ಮಾಡಿಕೊಂಡು ಹೊರಬಂದ ಅಮ್ಮು—

'ಜಯಂತ್... ಸಾರಿ, ಈ ದಿನ ಎರಡು ಶಿಫ್ಟ್ ಶೂಟಿಂಗ್ ಇದೆ. ಮುಗಿಯಲು ಮಧ್ಯಾಹ್ನ ಎರಡು ಗಂಟೆಯಾದರೂ ಆಗಬಹುದು. ಪ್ಲೀಸ್ ಡೋಂಟ್ ಫೀಲ್ ಬ್ಯಾಡ್. ಕಾಯಬಹುದಾ ನೀನು...?'

'ಪರ್ವಾಗಿಲ್ಲ, ಪುಸ್ತಕ ಇದೆ, ಅಲ್ಲೇ ಮರದ ನೆರಳಿನಲ್ಲಿ ಕಟ್ಟೆ ಮೇಲೆ ಕುಳಿತು ಓದ್ತಾ ಇರ್ತೀನಿ'.

'ಥ್ಯಾಂಕ್ಸ್. ಪಕ್ಕದಲ್ಲೇ ಯುನಿಟ್ಟಿನ ಪ್ಯಾಂಟ್ರಿ ಇದೆ, ಕಾಫಿ ತಿಂಡಿ ಎಲ್ಲಾ ಸಿಗುತ್ತೆ. ಟೇಕ್ ಕೇರ್'.

ಕೈಬೀಸಿ ದುಡುದುಡು ಅಂತ ಅಮ್ಮು ವಾಪಸ್ ಸೆಟ್‌ಗೆ ಓಡಿದ್ದಳು. ಮರದ ಕೆಳಗಿನ ಕಟ್ಟೆ ಮೇಲೆ ಕೂತು, ಪುಸ್ತಕ ತೆರೆದು ಓದಲು ಕುಳಿತ ಜಯಂತ. ಸ್ವಲ್ಪ ಹೊತ್ತಿನಲ್ಲೇ ಜಾಹ್ನವಿ ನಿಧಾನವಾಗಿ ಕಾಲೆಳೆಯುತ್ತಾ, ತುಸು ತಟ್ಟಾಡುತ್ತಾ ಬಂದು ಜಯಂತನ ಪಕ್ಕದಲ್ಲಿಯೇ ಸ್ವಲ್ಪ ದೂರದಲ್ಲಿ ಕುಳಿತಳು. ಅವಳು ಹಾಕಿದ್ದ ಬಟ್ಟೆ, ಮೇಕಪ್ ಎಲ್ಲ ನೋಡಿ ಅವಳು ಸೀರಿಯಲ್‌ನ ನಟಿ ಇರಬಹುದು ಎಂದು ಸುಲಭವಾಗಿ ಜಯಂತ ಊಹಿಸಿದ್ದ. ಸ್ಥಿರವಾಗಿ ಕೂರಲಾಗದೆ, ತಲೆ ಸುತ್ತು ಬಂದು ಇನ್ನೇನು ಬಿದ್ದೇಹೋದಳು ಎಂಬಂತೆ ಮೆಲ್ಲಗೆ ತೂರಾಡುತ್ತಿದ್ದಳು.

'ಮೇಡಮ್, ಆರ್ ಯು ಆಲ್ ರೈಟ್? ನೀರೇನಾದ್ರೂ ತಂದುಕೊಡಲಾ?'

'ಇಫ್ ಯು ಡೋಂಟ್ ಮೈಂಡ್, ಪ್ಯಾಂಟ್ರಿಯಿಂದ ಒಂದು ಲೋಟ ಕಾಫಿ ತಂದುಕೊಡಬಹುದಾ?'

'ಶ್ಯೂರ್'.

ಎರಡೇ ನಿಮಿಷದಲ್ಲಿ ಕಾಫಿಯೊಂದಿಗೆ ಬಂದ ಜಯಂತ, 'ಏನಾಗ್ತಾಯಿದೆ ಮೇಡಮ್?'

'ಅಲ್ಲಿ ಒಳಗಡೆ ನನಗೆ ವಿಷ ಕುಡುಸ್ಬಿಟ್ರು'.

ಯಾವುದೋ ಅಮಲಿನಲ್ಲಿದ್ದಂತೆ ಅಸಂಬದ್ಧವಾಗಿತ್ತು ಮಾತು. ಜಯಂತನಿಗೆ ಆತಂಕವಾಗಿತ್ತು, ಜೊತೆಗೆ ಹೇಗೆ ಪ್ರತಿಕ್ರಿಯಿಸಬೇಕು ಎಂದು ತಿಳಿಯದಾಗಿತ್ತು.

'ಡಾಕ್ಟರನ್ನು ನೋಡಬೇಕೇನೊ?'

'ನಿಮ್ಮ ಹೆಸರೇನು?'

'ಜಯಂತ್'.

'ಧಾರಾವಾಹಿಯಲ್ಲಿ ನನ್ನ ಪಾತ್ರವನ್ನು ಶಾಶ್ವತವಾಗಿ ಮುಗಿಸಿ ನನ್ನನ್ನು ಮನೆಗೆ ಕಳಿಸಬೇಕಿತ್ತು ಡೈರೆಕ್ಟರ್ ದಿನೇಶ್ ಸಾಹೇಬರಿಗೆ. ಅದಕ್ಕೆ ಈ ಎಪಿಸೋಡಲ್ಲಿ ನನ್ನ ಪಾತ್ರಕ್ಕೆ ವಿಷ ಕುಡಿಸಿ ಆತ್ಮಹತ್ಯೆ ಮಾಡುಸ್ಬಿಟ್ರು...'

ಜಯಂತ ಈಗ ತುಸು ನಿರಾಳನಾಗಿದ್ದ.

'ಆದರೆ ವಿಷ ನನಗೆ ಹೊಸದೇನಲ್ಲ, ಬೇರೆ ಬೇರೆ ತರದ ವಿಷ, ಬೇರೆ ಬೇರೆ ಪ್ರಮಾಣದಲ್ಲಿ ತಗೋಳೋದು ರೂಢಿಯಾಗೋಗಿದೆ'.

ಅವಳ ಕೈಚೀಲದಿಂದ ಮಾತ್ರೆಗಳ ಒಂದು ಸ್ಟ್ರಿಪ್ ತೆಗೆದು ಜಯಂತನ ಮುಖದ ಮುಂದೆ ಅಲ್ಲಾಡಿಸುತ್ತಾ, 'ಈಗ ಸದ್ಯಕ್ಕೆ ಇದು'.

'ಮಾದಕ ದ್ರವ್ಯಗಳ ಮೊರೆಹೋಗುವಷ್ಟು ದುಸ್ತರವಾಗಿದೆಯ ಜೀವನ?'

'ಪ್ರತಿಕ್ರಿಯಿಸುವ ನನ್ನ ವ್ಯಕ್ತಿತ್ವದಲ್ಲಿನ ವಿಕಾರ, ವಿಕೃತಿಗಳು ಎಷ್ಟು ಕಾರಣವಾಗಿರಬಹುದೊ, ಅಷ್ಟರಮಟ್ಟಿಗೆ ನಾನು ತೊಡಗಿಸಿಕೊಂಡ ವ್ಯವಸ್ಥೆಯಲ್ಲಿರುವ ಹುಳುಕು ವಿರೂಪಗಳು ಕಾರಣವಿರಬಹುದಲ್ಲವೇ?'

(ಸಶೇಷ)